# ಕಾಮನಬಿಲ್ಲು ಕಮಾನು ಕಟ್ಟಿದೆ!

ಕಾಮನಬಿಲ್ಲಿನ ವರ್ಣಗಳನ್ನು ಒಳಗೊಂಡ ಉಡುಪು–ಒಡವೆ ಫ್ಯಾಷನ್ ಪ್ರಪಂಚದಲ್ಲಿ ಮಿಂಚುತ್ತಿದೆ. ವಿವಿಧ ಬಣ್ಣಗಳ ಹರಳುಗಳು ಬೆಳಕಿನ ಸಂಯೋಜನೆಯೊಂದಿಗೆ ಪ್ರತಿಫಲನಗೊಂಡು ಆಭರಣ ಮಹಿಳೆಯರನ್ನು ಬಹುವಾಗಿ ಸೆಳೆಯುತ್ತಿದೆ.

■ ಉಮಾ ವೇಣೂರು





ಕಾಮನಬಿಲ್ಲು ಕಮಾನು ಕಟ್ಟಿದೆ ಮೋಡದ ನಾಡಿನ ಬಾಗಿಲಿಗೆ
ಬಣ್ಣಗಳೇಳನು ತೋರಣ ಮಾಡಿದೆ; ಕಂದನ ಕಣ್ಣಿಗೆ ಚಂದವನೂಡಿದೆ...

ಎರಡನೆ ತರಗತಿಯ ಪಠ್ಯದಲ್ಲಿರುವ ಮಹಾಕವಿ ಕುವೆಂಪು ಅವರು ಬರೆದ ಈ ಪದ್ಯದಲ್ಲಿ ಕಾಮನಬಿಲ್ಲಿನ ಸೊಬಗನ್ನು ಎಷ್ಟು ಚೆನ್ನಾಗಿ ವರ್ಣಿಸಲಾಗಿದೆ ಅಲ್ಲವೇ? ಮಳೆಗಾಲದಲ್ಲಿ ಮುಸ್ಸಂಜೆಯ ವೇಳೆಗೆ ಬಾನಿನ ಉದ್ದಗಲಕ್ಕೂ ಮೂಡುವ ಕಾಮನಬಿಲ್ಲು ಪ್ರಕೃತಿಯ ವಿಸ್ಮಯವೇ ಆಗಿದೆ.

***

ಕಾರ್ಮೋಡ ಸರಿಸಿ ಸುರಿಸಿಹ ಮಳೆ; ಸಪ್ತವರ್ಣಗಳ ಹರಿಸಿ ಚಿತ್ತಾರವ ಹೆಣೆದಿದೆ
ರಂಗು ರಂಗಿನಲಿ ಒಲವಿನೋಕುಳಿಯ ಲಾಸ್ಯವೇ; ಚೆಂದದಿ
ಬಹು ಮುದದಿ ಮೈಮನ ರೋಮಾಂಚನಗೊಳಿಸಿದೆ.

ಇದೇ ರೀತಿ ಇನ್ನೊಂದು, ಕವಯಿತ್ರಿ ಸವಿತಾ ಅವರು ಬರೆದಿದ್ದು, ಕಾಮನಬಿಲ್ಲಿನ ಬಣ್ಣಗಳ ಬಗ್ಗೆ, ಸಪ್ತವರ್ಣಗಳು ಚಿತ್ತಾರ ಬರೆದಿರುವ ಬಗ್ಗೆ ಇದೆ. ಇದೂ ಕೂಡ ಏಳು ಬಣ್ಣಗಳ ಮೋಡಿಯನ್ನು, ಅದು ರೋಮಾಂಚನಗೊಳಿಸುವ ಪರಿಯನ್ನು ಅಭಿವ್ಯಕ್ತಗೊಳಿಸಿದೆ.

***

ಇದು ಸಾಹಿತ್ಯದ ಮಾತಾಯಿತು, ಕಾಮನಬಿಲ್ಲು ಫ್ಯಾಷನ್ ಜೊತೆಗೂ ತಳಕು ಹಾಕಿಕೊಂಡಿದೆ. ಏಳು ಬಣ್ಣಗಳನ್ನೊಳಗೊಂಡ ಕಾಮನಬಿಲ್ಲು ಉಡುಗೆ–ತೊಡುಗೆಯೊಂದಿಗೆ ಅನುಬಂಧ ಮೂಡಿಸಿದೆ. ಒಡವೆಯೊಂದಿಗೆ ಸಂಬಂಧ ಬೆಸೆದಿದೆ. ಕಾಮನಬಿಲ್ಲಿನ ಬಣ್ಣದ ಉಡುಪು, ಒಡವೆ, ಕೊಡೆ, ಆ್ಯಕ್ಸೆಸರೀಸ್ ಎಲ್ಲದರಲ್ಲೂ ಸಪ್ತವರ್ಣಗಳದ್ದೇ ಮಿಂಚು, ಅವುಗಳದೇ ಹೊಳಪು, ಬಣ್ಣ ಬಣ್ಣದ ಚಿತ್ತಾರ, ನೋಡುವವರ ಮನ ಮುದ ನೀಡುವ ‘ರೈನ್‌ಬೊ’ ಈಗ ಫ್ಯಾಷನ್ ಟ್ರೆಂಡ್.

ಉಡುಪಿನಲ್ಲಿ ಸಲ್ವಾರ್, ಸೀರೆ, ದುಪಟ್ಟಾ, ಸ್ಕರ್ಟ್, ಟಾಪ್ ಎಲ್ಲ ವೈವಿಧ್ಯದಲ್ಲೂ ಏಳು ಬಣ್ಣಗಳು ಅಂದದ ಚಿತ್ತಾರ ಮೂಡಿಸುತ್ತವೆ. ಒಡವೆ ತೆಗೆದುಕೊಂಡರೆ ಮೊದಲ ನೋಟದಲ್ಲೇ ಕಾಮನಬಿಲ್ಲಿನ ಚೋಕರ್ ಬೇಕೇ ಬೇಕು ಎಂದು ಖರೀದಿಸುವಂತಾಗುತ್ತದೆ, ಏಳು ಬಣ್ಣಗಳಿಂದ ಕಂಗೊಳಿಸುವ ಕೊಡೆಯನ್ನು ಹಿಡಿದು ಮಳೆಯಲ್ಲಿ